ಕರ್ನಾಟಕ ಸರಕಾರ

# ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

" ಅಭಿವೃದ್ಧಿ ಭವನ " ಐವಾನ-ಎ-ಶಾಹಿ, ಕಲಬುರಗಿ - 585 102

ದೂರವಾಣಿ : (08472) - 256767, 239556, 223606 - ಫ್ಯಾಕ್ಸ : (08472) 227527

E-mail : hkadbgulb@gmail.com, hkrdbklb@gmail.com Website : hkrdb.kar.nic.in

ಸಂಖ್ಯೆ:ಯೋಜನೆ/ಮ್ಯಾಕ್ರೋ/ಸಾಮನ್ಯ/46/2017-18/1221 ದಿನಾಂಕ: 31-08-2017

## ಸುತ್ತೋಲೆ

ವಿಷಯ: ಹೈ.ಕ.ಪ್ರ.ಅ.ಮಂಡಳಿಯ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಗ್ರಾಮೀಣ ಸಂಪರ್ಕ ರಸ್ತೆಗಳಿಗೆ ಪಿ.ಎಂ.ಜಿ.ಎಸ್.ವೈ. ಮಾರ್ಗಸೂಚಿಯನ್ವಯ ಎಸ್.ಟಿ.ಎ. ಹಾಗೂ ಪಿ.ಎಂ.ಸಿ/3ನೇ ತಂಡಕ್ಕೆ ತಗಲುವ ವೆಚ್ಚವನ್ನು ಅಂದಾಜು ಪತ್ರಿಕೆಯಲ್ಲಿ ಕಾಯ್ದಿರಿಸುವ ಕುರಿತು.

ಉಲ್ಲೇಖ: ಮಂಡಳಿಯ ಸುತ್ತೋಲೆ ಸಂಖ್ಯೆ: ಹೈಕಮಂ/ಯೋಶಾ/ಕ್ರಿಯೋ/ಸಾಮನ್ಯ/46/2017-18/960 ದಿನಾಂಕ: 7/10-7-2017

*****

ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕ್ರಿಯಾ ಯೋಜನೆಯಲ್ಲಿ ಮಂಜೂರಾತಿ ನೀಡಲಾದ ಗ್ರಾಮೀಣ ಸಂಪರ್ಕ ರಸ್ತೆಗಳಿಗೆ ಸಂಬಂಧಿಸಿದಂತೆ ಉಲ್ಲಿಖಿತ ಪತ್ರದಲ್ಲಿ ಕ್ರಮ ಸಂಖ್ಯೆ 9 (ix) ರಲ್ಲಿ "ಗ್ರಾಮಗಳ ಕೂಡು ರಸ್ತೆ ಕುರಿತಾಗಿ ಈ ಕಛೇರಿಯ ಆದೇಶ ಸಂಖ್ಯೆ: ಹೈ.ಕ.ಪ್ರ.ಅ.ಮಂ/ಯೋಜನೆ/ಸಾಮಾನ್ಯ/2016-17 ದಿನಾಂಕ: 05-06-2017ರಂತೆ ಅಂದಾಜು ಪತ್ರಿಕೆಯ ತಯಾರಿಕೆಯನ್ನು ಹಾಗೂ ಗುಣಮಟ್ಟದ ಪರಿಶೀಲನೆಯನ್ನು ಪಿ.ಎಂ.ಜಿ.ಎಸ್.ವೈ. ನಿಯಮಾವಳಿಯಂತೆ ರಚಿತಗೊಂಡಿರುವ ಎಸ್.ಟಿ.ಎ. ಹಾಗೂ ಕ್ವಾಲಿಟಿ ಮಾನಿಟರ್ಸ್ ಮುಖಾಂತರ ಕಡ್ಡಾಯವಾಗಿ ಕೈಗೊಳ್ಳುವುದು. ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಗಳಿಗೆ ಮಂಡಳಿವತಿಯಿಂದ ನಿಯೋಜಿಸಿದ ಪಿ.ಎಂ.ಸಿ. ಸೇವೆಗಳ ಅಗತ್ಯ ಇರುವುದಿಲ್ಲ." ಎಂದು ತಿಳಿಸಲಾಗಿತ್ತು.

ದಿನಾಂಕ: 31-08-2017 ರಂದು ಜರುಗಿದ ವಿಡಿಯೋ ಸಂವಾದಲ್ಲಿ ಗ್ರಾಮೀಣ ಸಂಪರ್ಕ ರಸ್ತೆಗಳಿಗೆ ಪಿ.ಎಂ.ಜಿ.ಎಸ್.ವೈ. ಮಾರ್ಗಸೂಚಿಯನ್ವಯ ಅಂದಾಜು ಪತ್ರಿಕೆಯನ್ನು ಇಲಾಖೆಯ ಪಿ.ಎಂ.ಸಿ. ಮೂಲಕ ತಯಾರಿಸಲು ಹಾಗೂ ಪರಿಶೀಲನೆಯನ್ನು ಎಸ್.ಟಿ.ಎ. ಮೂಲಕ ಕೈಗೊಳ್ಳುವ ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಅಂದಾಜು ಪತ್ರಿಕೆಯಲ್ಲಿ ಅಳವಡಿಸುವ ಕುರಿತು ಸ್ಪಷ್ಟೀಕರಣಕ್ಕಾಗಿ ಕೋರಲಾಗಿದೆ. ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.

"ಹೈ.ಕ.ಪ್ರ.ಅ.ಮಂಡಳಿಯಿಂದ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಗ್ರಾಮೀಣ ಸಂಪರ್ಕ ರಸ್ತೆಗಳ ಅಂದಾಜು ಪತ್ರಿಕೆಗಳನ್ನು ಇಲಾಖಾ ಅಧಿಕಾರಿಗಳು/ಸಿಬ್ಬಂದಿಯವರು ಖುದ್ದಾಗಿ ಅಂದಾಜು ಪತ್ರಿಕೆಯನ್ನು ತಯಾರಿಸುವುದು, ಒಂದು ವೇಳೆ ಪಿ.ಎಂ.ಸಿ. ಅವಶ್ಯಕತೆ ಇದ್ದಲ್ಲಿ ಮಂಡಳಿಯಿಂದ ನೇಮಿಸಲ್ಪಟ್ಟ ಪಿ.ಎಂ.ಸಿ. ಮೂಲಕ ಡಿ.ಪಿ.ಆರ್. ಯನ್ನು ತಯಾರಿಸಲು ಕ್ರಮ ಕೈಗೊಳ್ಳಬಹುದಾಗಿದೆ. ಆದರೆ ಎಲ್ಲಾ ಡಿ.ಪಿ.ಆರ್.ಗಳ ಪರಿಶೀಲನೆಯನ್ನು ಕಡ್ಡಾಯವಾಗಿ ಪಿ.ಎಂ.ಜಿ.ಎಸ್.ವೈ. ನಿಯಮಾವಳಿಯಂತೆ ರಚಿತಗೊಂಡಿರುವ ಎಸ್.ಟಿ.ಎ. ಮೂಲಕ ಕೈಗೊಳ್ಳುವುದು. ಗುಣಮಟ್ಟ ಪರಿಶೀಲನೆಯನ್ನು ಮಂಡಳಿಯಿಂದ ನೇಮಿಸಲ್ಪಟ್ಟ ಮೂರನೇ ತಂಡದಿಂದ ಪರಿಶೀಲನೆ ಮಾಡಿಸುವುದು. ಅಂದಾಜು ಪತ್ರಿಕೆಯಲ್ಲಿ ಪಿ.ಎಂ.ಜಿ.ಎಸ್..ವೈ. ಇಲಾಖೆಯಿಂದ ನೇಮಿಸಲ್ಪಟ್ಟ ಎಸ್.ಟಿ.ಎ. ಗೆ ನಿಗಧಿಪಡಿಸಿದ ದರ ಹಾಗೂ ಮಂಡಳಿಯಿಂದ ನೇಮಿಸಲಾದ ಪಿ.ಎಂ.ಸಿ./3ನೇ ತಂಡಕ್ಕೆ ನಿಗಧಿಪಡಿಸದ ದರ ಮಾತ್ರ ಅಂದಾಜು ಪತ್ರಿಕೆಗಳಲ್ಲಿ ಅನುದಾನ ಕಾಯ್ದಿರಿಸುವುದು."

5-9-17

ಕಾರ್ಯದರ್ಶಿಗಳು,
ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ

1. ಎಲ್ಲಾ ಜಿಲ್ಲಾಧಿಕಾರಿಗಳು, ಹೈ.ಕ.ವಿಭಾಗ,
2. ಎಲ್ಲಾ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹೈ.ಕ.ವಿಭಾಗ
3. ಎಲ್ಲಾ ಅನುಷ್ಠಾನ ಅಧಿಕಾರಿಗಳು, ಹೈ.ಕ.ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.